# ಆಹಾ ಸುದ್ದಿ!

★ ಸಸಿತೋಟ

ಕ್ಯಾಲಿಫೋರ್ನಿಯಾದ ಡಾರ್ಲಿನ್ ಫ್ಲಿನ್‌ಗೆ ಶೂಗಳೇ ಡಾರ್ಲಿಂಗ್. ಮನೆಯಲ್ಲಿ ಎಲ್ಲಿ ನೋಡಿದರೂ ಚಪ್ಪಲಿ, ಶೂಗಳ ರಾಶಿ. ಮನೆಯನ್ನೇ 'ಶೂಗಳ ಸ್ವರ್ಗ' ಮಾಡಿಕೊಂಡಿದ್ದಾಳೆ. ಬರೋಬ್ಬರಿ 16,400 ಜೊತೆ ಶೂಗಳು. ಮೌಲ್ಯವೋ 5 ಲಕ್ಷ ಡಾಲರ್. ಫಿಲಿಪ್ಪೀನ್ಸ್‌ನ ಮಾಜಿ ಅಧ್ಯಕ್ಷರ ಪತ್ನಿ ಇಮೆಲ್ಡಾ ಮಾರ್ಕೋಸ್ ಬಳಿಯೂ ಇಷ್ಟೊಂದು ಜೊತೆ ಶೂಗಳು ಇರಲಿಲ್ಲ ಎಂಬ ಹೆಮ್ಮೆ ಈಕೆಗೆ. ಇಮೆಲ್ಡಾಳ ಶೂಗಳು ರಿಪೇರಿಯನ್ನೂ ಕಾಣದೆ ಅಲ್ಲಿಯ ವಸ್ತುಸಂಗ್ರಹಾಲಯದಲ್ಲಿ ಬಿದ್ದಿವೆ. ಈಕೆಯ ಶೂಗಳಿಗೆ ಆ ಗತಿ ಬಾರದಿರಲು ವಾರಸುದಾರರನ್ನು ಮಾಡುವುದು ಒಳಿತು.




ಸವಿ ಅಂದರೆ ಜೇನಿನ ಸವಿ. ಬಣ್ಣ ಅಂದರೆ ಜೇನುತುಪ್ಪದ ಬಣ್ಣ. ಆದರೆ ಫ್ರಾನ್ಸ್‌ನ ಮುಲ್‌ಹೌಸಿನಲ್ಲಿ ಈ ಜೇನುತುಪ್ಪಕ್ಕೆ ನೀಲಿ, ಹಸಿರು ಬಣ್ಣ. ಕಂಗಾಲಾದ ಜೇನು ಸಾಕುವವರು ಜೇನ್ನೊಣದ ಬೆನ್ನು ಹತ್ತಿದರು. ಸಮೀಪ ಇರುವ ಕ್ಯಾಂಡಿ ಕಾರ್ಖಾನೆ ತ್ಯಾಜ್ಯ ಬಳಸುವ ಜೈವಿಕ ಅನಿಲ ಘಟಕದಿಂದ ಹೊಲಸನ್ನೆಲ್ಲಾ ಆರಾಮವಾಗಿ ಹೊತ್ತು ತರುತ್ತಿದ್ದವಂತೆ ಈ ಜೇನ್ನೊಣಗಳು. ಷಾರ್ಟ್‌ಕಟ್ ಬಳಸುವ ಜಾಣ್ಮೆ ಈ ಆಧುನಿಕ ಜೇನ್ನೊಣಗಳಿಗೂ ಗೊತ್ತು.

ದಕ್ಷಿಣ ಕೊರಿಯಾದ ಉಪಾಹಾರ ಗೃಹಗಳಲ್ಲಿ ಜೀವಂತ ಅಕ್ಟೋಪಸ್ ನುಂಗುವುದು ಭಾರೀ ಜನಪ್ರಿಯವಂತೆ. ಆದರೊಂದು ಸಮಸ್ಯೆ. ಈ ಜಾರುವ, ಅಂಟುಅಂಟಾದ ಪ್ರಾಣಿಯನ್ನು ಕೈಗಳಲ್ಲಿ ಹಿಡಿಯುವುದನ್ನು ಮೊದಲು ಕಲಿಯಬೇಕಂತೆ. ನಂತರ ಅದು ಗಂಟಲನ್ನು ಕಚ್ಚಿ ಹಿಡಿದರೆ... ಗಂಟಲೊಳಗಿದ್ದಂತೆ ಸಾಯಿಸುವ ಕಲೆ ಕಲಿಯಬೇಕು. ರುಚಿರುಚಿಯಾಗಿ ಖಾದ್ಯ ತಯಾರಿಸಿ ಗಂಟಲಿಗಿಳಿಸುವ ಬದಲು ತಿನ್ನುವ ಕಲೆಯನ್ನು ಯಾಕಿಷ್ಟು ಸಂಕೀರ್ಣಗೊಳಿಸಿದ್ದಾರೋ!



ಕಲಾಕೃತಿ ರಚನೆಯಲ್ಲಿ ರಕ್ತ, ಬೆವರು, ಕಣ್ಣೀರು ಹರಿಸಿದ್ದೇವೆ ಎಂಬುದು ಕಲಾವಿದರ ಅಂಬೋಣ. ಆದರೆ ಇಲ್ಲೊಬ್ಬ ಕಲಾವಿದ ತನ್ನ ರಕ್ತದಿಂದಲೇ ಕಲಾಕೃತಿ ರಚಿಸಿ ಕಲೆಗೆ ರಕ್ತದ ರುಚಿ ಹತ್ತಿಸಿದ್ದಾನೆ. ಅಮೆರಿಕಾದ ಕಲಾವಿದ ಕಾಸ್ಟಾಗ್ಲಿಯಾಗೆ ಬಣ್ಣ ತರಲು ಅಂಗಡಿ ಸುತ್ತುವ ಕೆಲಸವೂ ಇಲ್ಲ, ಬಣ್ಣಕ್ಕೆ ಕೊಡುವ ದುಡ್ಡೂ ಉಳಿದ ಹಾಗಾಯಿತು.



ನ್ಯೂಯಾರ್ಕ್‌ನ ಜಾದೂಗಾರ ಡೇವಿಡ್ ಬ್ಲೇನ್ 'ವಿದ್ಯುತ್ ಹರಿದಂತಾಯ್ತು' ಎಂಬ ಉಪಮೇಯವನ್ನು ಸುಳ್ಳು ಸುಳ್ಳೇ ಬಳಸುವ ಬದಲು ಇನ್ನು ಮುಂದೆ ನಿಜವಾಗಿ ಅನುಭವಿಸಿಕೊಂಡು ಹೇಳಬಹುದು. ಮೈ ತುಂಬ ಲೋಹದ ಉಡುಪು ತೊಟ್ಟು 10 ಲಕ್ಷ ವೋಲ್ಟ್ ವಿದ್ಯುತ್ ಅನ್ನು ಮೂರು ದಿನಗಳ ಕಾಲ ಹರಿಸಿಕೊಳ್ಳಲು ತಯಾರಿ ನಡೆಸಿದ್ದಾನೆ ಈ ಜಾದೂಗಾರ. ಷಾಕ್ ಹೊಡೆಸಿಕೊಂಡು ಬಿದ್ದರೆ ನೇರ ಕೆಳಗಿನ ಹಡ್ಸನ್ ನದಿಯಲ್ಲಿ ಈಜಬಹುದು. ತಡೆದುಕೊಂಡು ದಾಖಲೆ ಸ್ಥಾಪಿಸಿದರೆ ಮಾಜಿ ಪ್ರೇಯಸಿ ಕೈಕೊಟ್ಟ ಷಾಕ್ ಇದರ ಮುಂದೆ ಏನೇನೂ ಅಲ್ಲ ಎಂದು ಬೀಗಬಹುದು.

ರೊಮಾನಿಯಾದ ಬುಚಾರೆಸ್ಟ್‌ನಲ್ಲಿ ಈಗ ದ್ರಾಕ್ಷಿಯ ಸುಗ್ಗಿ. ಹಣ್ಣು ಕಟಾವು ಮಾಡಿದರಷ್ಟೇ ಸಾಲದು, ಎಳೆ ಲಿಂಬೆ ಹಣ್ಣಿನಂತಹ ಹುಡುಗಿಯರ ಮೃದು ಪಾದಗಳಿಂದ ತುಳಿಸಿ ವೈನ್ ತಯಾರಿಸಬೇಕು. ಆ ದ್ರಾಕ್ಷಿಹಣ್ಣುಗಳು ಧನ್ಯವೋ, ಮಾನಿನಿಯರ ಪಾದಗಳಿಂದ ತುಳಿಸಿಕೊಂಡು ತಯಾರಾದ ಮದಿರೆಯನ್ನು ತುಟಿಗೆ ಇಟ್ಟುಕೊಂಡವರು ಧನ್ಯರೋ!

